# ಮಾನವ ಚೈತನ್ಯದ ಮೂಲ

ಸ್ವಾಮಿ ರಂಗನಾಥಾನಂದ



ಮಾನವನ ನೈಜ ಸ್ವರೂಪವು ಸಾಕ್ಷಾತ್ ಪರಬ್ರಹ್ಮವೇ ಆಗಿದೆ; ಅನೇಕ ಉಪಾಧಿಗಳಿಂದ ಆವೃತವಾಗಿ ತನ್ನ ಸ್ವರೂಪವನ್ನು ಮರೆತ ಮಾನವನು ಆಧ್ಯಾತ್ಮಿಕ ಸಾಧನೆಗಳಿಂದ ಮರಳಿ ತನ್ನ ಮೂಲಸ್ಥಿತಿಯನ್ನು ಕಂಡುಕೊಳ್ಳಬಹುದಾಗಿದೆ ಎಂಬ ವೇದಾಂತ ತತ್ತ್ವವನ್ನು ಸ್ಪಷ್ಟವಾಗಿ ಜಗತ್ತಿನಾದ್ಯಂತ ಸಾರಿದವರು ಸ್ವಾಮಿ ವಿವೇಕಾನಂದರು. ಅವರ ಮಾರ್ಗವನ್ನೇ ಅನುಸರಿಸಿ ವಿಜ್ಞಾನ ಮತ್ತು ಅಧ್ಯಾತ್ಮಗಳ ನಡುವಿನ ಸಮನ್ವಯದ ಅಗತ್ಯವನ್ನು ಪ್ರತಿಪಾದಿಸಿದವರು ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು. ವಿಖ್ಯಾತ ವಾಗ್ಮಿಯೂ, ಲೇಖಕರೂ ಆಗಿದ್ದ ಅವರು ಹಲವು ಮಂದಿ ಆಧ್ಯಾತ್ಮಿಕ ಪಿಪಾಸುಗಳಿಗೆ ಗುರುವಾಗಿ ಮಾರ್ಗದರ್ಶನ ನೀಡಿದವರು. ಅವರು ಚಿಕಾಗೋದ ವೇದಾಂತ ಸೊಸೈಟಿಯಲ್ಲಿ ೧೯೮೮ರಲ್ಲಿ ನೀಡಿದ ಪ್ರವಚನವನ್ನು ಆಧರಿಸಿ ರಚಿತವಾದ, '**The Approach to Truth in Vedanta**' ಎಂಬ ಗ್ರಂಥದಿಂದ ಆಯ್ದ ಕೆಲವು ಭಾಗಗಳ ಅನುವಾದವಿದು.

**ಸ**ತ್ಯ ಹಾಗೂ ಮಾನವ ಕಲ್ಯಾಣದ ಬಗ್ಗೆ ವೇದಾಂತವು ಹೊಂದಿದ್ದ ಒಲವಿನಿಂದಾಗಿ, ಅದು ಮಾನವನನ್ನು ಕುರಿತು ಆಳವಾಗಿ ಅಧ್ಯಯನ ನಡೆಸುವ ವಿಜ್ಞಾನವೊಂದನ್ನು ಅಭಿವೃದ್ಧಿಪಡಿಸಿತು. ಇದರಿಂದ, ಸಾಂತನೂ ಮರ್ತ್ಯನೂ ಆದ ಮಾನವನ ಒಳಗೆ ಅನಂತವೂ ಅಮರವೂ ಆದ ಆತ್ಮವಿದೆ ಎಂದು ವೇದಾಂತ ಕಂಡುಹಿಡಿಯಿತು. ಭೌತಿಕ ವಿಜ್ಞಾನದಲ್ಲಿರುವಂತೆ ಇಲ್ಲಿ ಕರಾರುವಾಕ್ಕಾದ ಅಳತೆ, ಲೆಕ್ಕಚಾರಗಳು ಇಲ್ಲದಿರಬಹುದು. ಭೌತಿಕ ವಿಜ್ಞಾನದಲ್ಲಿ ಪ್ರಮಾಣ ಮುಖ್ಯ; ಆದರೆ ವೇದಾಂತದಲ್ಲಿ ನೀವು ಅಧ್ಯಯನ ಮಾಡುತ್ತಿರುವುದು ನಿಮ್ಮನ್ನು ಕುರಿತು — ಹೀಗಾಗಿ ಇಲ್ಲಿ ಜೀವನದ ಗುಣವೇ ಮುಖ್ಯ, ಪ್ರಮಾಣವಲ್ಲ. ಇಂಥ ಅನ್ವೇಷಣೆಯಿಂದ ಮಾತ್ರ ಮಾನವನ ಜೀವನದಲ್ಲಿ ಮೂಲಭೂತ ಉನ್ನತಿ ಉಂಟಾಗುವುದು. ಉಪನಿಷತ್ತುಗಳು ಮಾನವನನ್ನು ಕುರಿತ ಶ್ರೇಷ್ಠವಾದ ವಿಜ್ಞಾನವನ್ನು ಅಭಿವೃದ್ಧಿಪಡಿಸಿದುದು ಹೀಗೆ. ಮಾನವನು ಹೊರನೋಟದಿಂದ ಹೀಗೆ ಕಾಣಿಸಿಕೊಳ್ಳುತ್ತಾನೆ; ಆದರೆ ಅವನು ಅಂತರಂಗದಲ್ಲಿ ಬೇರೆಯೇ ಆಗಿದ್ದಾನೆ. ಮಾನವನು ಸ್ವಾತಂತ್ರ್ಯ ಹಾಗೂ ಆವಶ್ಯಕತೆಗಳ ಅತ್ಯುತ್ತಮ ಸಂಮಿಶ್ರಣವಾಗಿದ್ದಾನೆ; ಅದೇ ರೀತಿ ಅವನು ಮರ್ತ್ಯ ಹಾಗೂ ಅಮೃತ ಈ ಎರಡರ ಸಂಮಿಶ್ರಣವೂ ಆಗಿದ್ದಾನೆ. ಮಹಾಭಾರತ ಹೇಳುತ್ತದೆ:

**ಅಮೃತಶ್ಚೈವ ಮೃತ್ಯುಶ್ಚ ದ್ವಯಂ ದೇಹೇ ಪ್ರತಿಷ್ಠಿತಮ್ ।**
**ಮೃತ್ಯುರಾಪದ್ಯತೇ ಮೋಹಾತ್ ಸತ್ಯೇನಾಪದ್ಯತೇಽಮೃತಮ್ ॥**

'ಅಮೃತತ್ವ ಹಾಗೂ ಮರ್ತ್ಯತ್ವ ಎರಡೂ ದೇಹದಲ್ಲಿ ನೆಲೆಸಿದೆ. ಮೋಹವನ್ನು ಹಿಂಬಾಲಿಸಿ ಹೋಗುವುದರಿಂದ ಮೃತ್ಯು ಲಭಿಸುವುದು; ಸತ್ಯವನ್ನು ಹಿಂಬಾಲಿಸುವುದರಿಂದ ಅಮೃತತ್ವವು ಲಭಿಸುವುದು.'

ವೇದಾಂತವು ಮಾನವನ ಮುಂದಿಟ್ಟಿರುವ ಸವಾಲು ಇದು. ಈ ಸವಾಲೆಂದರೆ: ಈ ಜನ್ಮದಲ್ಲಿಯೇ, ಈ ದೇಹದಲ್ಲಿರುವಾಗಲೇ ನಾವು ಬಲಿಷ್ಠವಾದ ಚಾರಿತ್ರ್ಯ ಹಾಗೂ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಬಹುದು; ನಮ್ಮ ವಿವೇಕ, ಅನುಕಂಪೆ, ಮಾನಸಿಕ ಸ್ಥಿರತೆ ಹಾಗೂ ನಿರ್ಭೀತಿ ಇವುಗಳನ್ನು ಸಮೃದ್ಧಗೊಳಿಸಬಹುದು. ಬಾಹ್ಯವಾದ ದೈಹಿಕ ಚೈತನ್ಯ ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ. ಆದರೆ ಒಂದು ಸಲ ಮಾನವನು ಅವುಗಳ ಜೊತೆ ಸೇರಿಕೊಂಡಾಗ ಅದು ಒಳ್ಳೆಯದೋ ಕೆಟ್ಟದೋ ಆಗಿದೆ ಎನ್ನುತ್ತಾನೆ. ಇಲ್ಲೊಂದು ದೀಪವಿದೆ ಎಂದಿಟ್ಟುಕೊಳ್ಳೋಣ. ಈ ದೀಪದ ಬೆಳಕಿನಿಂದ ನಾನು ನಕಲಿ ಚೆಕ್ ಬರೆಯಬಹುದು; ಅಂತೆಯೇ ಅದರ ಬೆಳಕಿನಿಂದಲೇ ಸೇವಾಕಾರ್ಯಗಳಿಗೆ ದೊಡ್ಡ ಮೊತ್ತದ ದೇಣಿಗೆ ಕೊಡಬಹುದು. ಎರಡಕ್ಕೂ ಬೆಳಕು ಜವಾಬ್ದಾರನಲ್ಲ. ಪರಿಸ್ಥಿತಿಗನುಗುಣವಾಗಿ

ನಾನು ಅದನ್ನು ಸರಿ ಅಥವಾ ತಪ್ಪು ಎಂಬುದಾಗಿ ಅರ್ಥೈಸಿಕೊಂಡು ಅದನ್ನು ಬಳಸಿಕೊಳ್ಳುತ್ತೇನೆ, ಅಷ್ಟೆ.

ಭೌತಿಕ ವಿಜ್ಞಾನವು ಭೌತಿಕ ಪ್ರಪಂಚದ ಚೈತನ್ಯವನ್ನು ಅರಿಯುವ ಹಾಗೂ ನಿಯಂತ್ರಿಸುವ ಜ್ಞಾನವನ್ನು ಒದಗಿಸುತ್ತದೆ. ಆದರೆ ವೇದಾಂತವು ಪ್ರತಿಯೊಬ್ಬ ಮಾನವನಲ್ಲಿ ಅಡಗಿರುವ ಚೈತನ್ಯದ ಮೂಲವನ್ನು ಅರಸುವ ಸೊಗಸಾದ ಅನ್ವೇಷಣೆಯನ್ನು ನಮಗೆ ನೀಡುತ್ತದೆ. ಮಾನವನ ದೇಹವಿಲ್ಲಿದೆ — ಅದು ಚೈತನ್ಯದ ಒಂದು ಕೇಂದ್ರಬಿಂದು; ಅದನ್ನು ನಾವು 'ಸ್ನಾಯುಬಲ' (ದೈಹಿಕ ಶಕ್ತಿ) ಎನ್ನುತ್ತೇವೆ. ಈ ಸ್ಥೂಲ ಚೈತನ್ಯ ತೀರ ಸಾಮಾನ್ಯವಾದುದು. ಒಂದು ಕಾಲದಲ್ಲಿ ಈ ಚೈತನ್ಯವೇ ತುಂಬ ಪ್ರಧಾನವಾಗಿತ್ತು. ಆದಿಮಾನವನು ಈ ದೈಹಿಕ ಶಕ್ತಿಯ ಮೇಲೆ ಮಾತ್ರ ನಿಯಂತ್ರಣ ಹೊಂದಿದ್ದ. ಇಂದು ಈ ದೈಹಿಕ ಶಕ್ತಿಯು ತೀರ ಸಾಮಾನ್ಯವೆನಿಸಿದೆ; ಏಕೆಂದರೆ ಇಂದು ವಿಜ್ಞಾನವು ಈ ದೈಹಿಕ ಶಕ್ತಿಗಿಂತ ಲಕ್ಷಪಟ್ಟು ಹೆಚ್ಚಿನ ಸಾಮರ್ಥ್ಯವಿರುವ ಚೈತನ್ಯವನ್ನು ನಿರ್ಮಿಸಬಲ್ಲುದು. ನಮ್ಮ ರಾಕೆಟ್‌ಗಳು ಸ್ನಾಯುಬಲಕ್ಕಿಂತ ಲಕ್ಷಪಟ್ಟು ಹೆಚ್ಚಿನ ಚೈತನ್ಯವಲ್ಲದೆ ಬೇರಲ್ಲ. ಆದ್ದರಿಂದ ದೈಹಿಕ ಶಕ್ತಿಯು ಅತ್ಯುನ್ನತ ಮಟ್ಟದ ಚೈತನ್ಯವಲ್ಲ.

ನೀವು ಸ್ನಾಯುವನ್ನು ನೋಡಿದಾಗ, ಅದೇ ದೊಡ್ಡದೆನಿಸುವುದು. ನಾವು ಇದನ್ನು ಸ್ಥೂಲ ಚೈತನ್ಯವೆನ್ನುತ್ತೇವೆ. ಆದರೆ ಈ ಸ್ಥೂಲಚೈತನ್ಯದ ಹಿಂದೆ ಸೂಕ್ಷ್ಮ ಚೈತನ್ಯದ ಮೂಲವಿದೆ. ಅದೇ ನರತಂತುಗಳು. ಈ ನರತಂತುಗಳು ತುಂಬ ತೆಳ್ಳಗಿವೆ; ಆದರೆ ಅದನ್ನು ಕತ್ತರಿಸಿದರೆ ಸ್ನಾಯುಗಳು ಸತ್ತಂತೆ. ಹೀಗೆ ಮಾನವನ ದೈಹಿಕ ರಚನೆಯಲ್ಲಿ ನಾವು ಚೈತನ್ಯದ ಅದ್ಭುತವಾದ ತರತಮ ಭೇದವನ್ನು ಕಾಣುತ್ತೇವೆ. ಬಾಹ್ಯ ಚೈತನ್ಯವು ಸ್ಥೂಲ ಹಾಗೂ ಸೀಮಿತ; ಆಂತರಿಕ ಚೈತನ್ಯವು ಸೂಕ್ಷ್ಮ ಹಾಗೂ ಅನಂತ. ನರವ್ಯೂಹದ ಹಿಂದೆ ಮಾನಸಿಕ ಶಕ್ತಿಯಿದೆ. ಅದರಲ್ಲಿ ಇನ್ನೂ ಹೆಚ್ಚಿನ ಚೈತನ್ಯವಿದೆ. ಅದು ಇನ್ನೂ ಸೂಕ್ಷ್ಮವಾದುದು. ನರವನ್ನಾದರೂ ನಾವು ನೋಡಬಹುದು, ಆದರೆ ಮಾನಸಿಕ ಶಕ್ತಿಯನ್ನು ನೋಡಲಾಗದು. ಪ್ರಸಿದ್ಧ ನರವ್ಯೂಹ ತಜ್ಞ ಸರ್ ಚಾರ್ಲ್ಸ್ ಶೆರಿಂಗ್ಟನ್ ಅವರು ಹೇಳುವಂತೆ, 'ಮಾನವನ ಮನಸ್ಸನ್ನು ಇಂದ್ರಿಯಗಳು ನೋಡಲಾರವು, ಅಷ್ಟೇ ಅಲ್ಲ, ಅವು ಎಂದೆಂದಿಗೂ ಹಾಗೇ ಇರುತ್ತವೆ.' ಯಾವುದೇ ಇಂದ್ರಿಯಗಳ ಮೂಲಕ ನಾವು ಮನಸ್ಸನ್ನು ನೋಡಲಾರೆವು; ಆದರೆ ಮನಸ್ಸಿನಲ್ಲಿ ಅಸಾಧಾರಣ ಚೈತನ್ಯ ಅಡಗಿರುತ್ತದೆ. ಎಂದಾದರೂ ಮಾನಸಿಕ ಆಘಾತವುಂಟಾದರೆ, ಸ್ನಾಯು, ನರ ಎಲ್ಲವೂ ಸತ್ತು ಹೋಗುತ್ತವೆ; ಅವುಗಳಲ್ಲಿ ಯಾವ ಚೈತನ್ಯವೂ ಉಳಿಯಲಾರದು. ಹೀಗೆ ನಾವು ಮಾನವನ ಅಂತರಂಗಕ್ಕೆ ಹೆಚ್ಚು ಹೆಚ್ಚು ಇಳಿದಂತೆಲ್ಲ, ಅವನ ಚೈತನ್ಯವು ಹೆಚ್ಚು ಹೆಚ್ಚು ಸೂಕ್ಷ್ಮತೆ, ಗಾಢತೆ ಹಾಗೂ ಅಂತರ್ಮುಖತೆಗಳನ್ನು ಹೊಂದುವವು.

ಕಠೋಪನಿಷತ್ತಿನ ಮೂರನೇ ಅಧ್ಯಾಯಕ್ಕೆ ಶ್ರೀ ಶಂಕರರು ಬರೆದಿರುವ ಭಾಷ್ಯದಲ್ಲಿ ಈ ಮೂರೂ ಪದಗಳನ್ನು ಬಳಸಿದ್ದಾರೆ : 'ಸೂಕ್ಷ್ಮ, ಮಹಾಂತಶ್ಚ ಪ್ರತ್ಯಗಾತ್ಮ-ಭೂತಶ್ಚ.' 'ಮಾನವನ ಚೈತನ್ಯವು ಸೂಕ್ಷ್ಮತೆ, ಮಹಾನತೆ ಹಾಗೂ ಅಂತರ್ಮುಖತೆಯ ದೃಷ್ಟಿಯಲ್ಲಿ ಮೇಲುಮೇಲಕ್ಕೆ ಹೋಗುತ್ತದೆ.' ಅಂತರಂಗದತ್ತ ಹೋದಂತೆಲ್ಲ ಗುಣ ಹಾಗೂ ಪ್ರಮಾಣದ ದೃಷ್ಟಿಯಿಂದ ಚೈತನ್ಯವು ಹೆಚ್ಚುತ್ತ ಹೋಗುವುದು; ಅದರ ಸೂಕ್ಷ್ಮತೆ ಅಧಿಕವಾಗುವುದು, ಅದರ ಮಹಾನತೆಯೂ ಹೆಚ್ಚುವುದು. ನಾವು ಇನ್ನಷ್ಟು ನಿಜವಾಗಿ ನಾವಾಗುವೆವು. ಸ್ನಾಯುಗಳು, ನಾವಲ್ಲ, ಅದು ನಮ್ಮ ಉಪಕರಣ ಅಷ್ಟೆ. ನರಗಳು ನೀವಾಗುವಿರಿ. ಇನ್ನೂ ಆಳಕ್ಕೆ ಹೋದಾಗ, ಮನಸ್ಸು ನಾವಾಗುವೆವು, ನರಗಳು ಕೇವಲ ಉಪಕರಣಗಳು, ಅಷ್ಟೆ. ಅನಂತರ ನಾವು ಮನಸ್ಸಿನ ಅಡಚಣೆ ಯನ್ನೂ ದಾಟಿ ಹೋಗುವೆವು. ಮನಸ್ಸಿನಾಚೆಗೆ ನಮ್ಮ ನಿಜವಾದ ಆತ್ಮವಿದೆ; ಅದು ಸ್ವತಃ ನಾವಾಗಿದ್ದೇವೆ, ಅದೆಂದಿಗೂ ವಸ್ತುವಾಗದು.

'ಅದರ ಅಸ್ತಿತ್ವವು ಅನಂತವಾದುದು' **(ಪುರುಷಂ ಮಹಾಂತಂ)** ಎಂದು ಶ್ವೇತಾಶ್ವತರ ಉಪನಿಷತ್ತು ಈ ವಿಷಯವನ್ನು ವಿವರಿಸುತ್ತದೆ. ಸಾಂತ ಮನುಷ್ಯನ ಒಳಗೆ ಅನಂತ ಮನುಷ್ಯನಿದ್ದಾನೆ. ಆಳವಾಗಿ ನಾವು ಹೋದಂತೆಲ್ಲ ಮಾನವನಲ್ಲಿ ಅಡಗಿರುವ ಇನ್ನಷ್ಟು ಹೆಚ್ಚಿನ ಚೈತನ್ಯವನ್ನೂ ನಾವು ಕಾಣುವೆವು.

ಹೀಗೆ ಆಂತರಿಕವಾಗಿ ಭೇದಿಸುತ್ತ ಹೋದಾಗ ನಾವು ಅಲ್ಲಿ ಎಂದೆಂದಿಗೂ ಇರುವ ಶುದ್ಧ ಚೈತನ್ಯದ ಅದ್ಭುತ ಮೂಲವನ್ನು ತಲುಪುತ್ತೇವೆ. ಇಂದು ನಾವು ನಮ್ಮ ದೈಹಿಕ ಶಕ್ತಿ, ಮಾನಸಿಕ ಶಕ್ತಿ ಹಾಗೂ ಬೌದ್ಧಿಕ ಶಕ್ತಿಗಳನ್ನು ಬಳಸಿಕೊಳ್ಳುತ್ತೇವೆ. ಇವೆಲ್ಲ ತೀರ ಸಾಮಾನ್ಯವಾದ ಶಕ್ತಿಗಳು. ಆದರೆ ಬಾಹ್ಯ ಪ್ರಪಂಚದಲ್ಲಿ ಅವು ಅಸಾಮಾನ್ಯ ರೀತಿಯಲ್ಲಿ ಕೆಲಸ ಮಾಡುತ್ತವೆ. ಬೌದ್ಧಿಕ ಶಕ್ತಿಗಳಿಂದಷ್ಟೇ ಮಾನವನ ಸೂಕ್ಷ್ಮತೆಗಳನ್ನು ಪರಿಹರಿಸಲಾಗದು – ವಿಶೇಷವಾಗಿ ಅಪರಾಧ, ಕ್ರೌರ್ಯಗಳು ಇಂದು ಎಲ್ಲಡೆ ವ್ಯಾಪಕ ಗೊಳ್ಳುತ್ತಿರುವುದನ್ನು ಕಂಡಾಗ. ಅಪರಾಧವನ್ನು ಬೌದ್ಧಿಕ ಶಕ್ತಿ ಪರಿಹರಿಸದು. ಕಾರಣ, ಅತಿಘೋರ ಅಪರಾಧಿಗಳು ಭಾರೀ ಬುದ್ಧಿವಂತರೇ ಆಗಿದ್ದಾರೆ! ಅವರಲ್ಲಿ ಬುದ್ಧಿಶಕ್ತಿ ಸಮೃದ್ಧವಾಗಿದೆ; ಆದರೆ ಆ ಬುದ್ಧಿಶಕ್ತಿಗೆ ತುಸು ಶಿಕ್ಷೆ ಅಗತ್ಯವಾಗಿದೆ. ಆ ಬುದ್ಧಿಶಕ್ತಿಯು ಇತರ ವ್ಯಕ್ತಿಗಳನ್ನು ಗೌರವಿಸಬೇಕು. ಅವರು ತಮ್ಮಲ್ಲೇ ಇರುವ ಅನಂತ ಶಕ್ತಿಯನ್ನು ಕಂಡುಕೊಳ್ಳದೆ ಹಾಗೆ ಮಾಡಲಾರರು. ತಮ್ಮ ರಕ್ತಗತ ಸ್ವಭಾವಕ್ಕೆ ಅವರು ಅಂಟಿಕೊಂಡಿರುವ ತನಕ ಹಾಗೆ ಮಾಡಲಾರರು.

ಪ್ರತಿಯೊಂದು ಮಗು ಕೂಡ ಒಂದು ಹೊಸ ದಿಕ್ಕಿನಲ್ಲಿ ಆಂತರಿಕವಾಗಿ ವಿಕಾಸ ಹೊಂದಬೇಕಾಗಿದೆ. ಅದು ಬುದ್ಧಿಯನ್ನು ಮೀರಿದ್ದು. ಹೆಚ್ಚಿನ ವಿದ್ಯಾಭ್ಯಾಸ ಹೆಚ್ಚಿನ ಪಾಂಡಿತ್ಯ ಅದನ್ನು ನೀಡಲಾರದು. ಆದ್ದರಿಂದಲೇ ಭಾರತದಲ್ಲಿ ಕೇವಲ ಪಾಂಡಿತ್ಯಕ್ಕೆ ಹೆಚ್ಚೇನೂ ಬೆಲೆಯಿಲ್ಲ. ಒಬ್ಬನು ದೊಡ್ಡ ಪಂಡಿತನಾಗಿರಬಹುದು; ಆದರೆ ಅವನಲ್ಲಿ ಪ್ರೀತಿ, ಅನುಕಂಪೆಗಳಿಲ್ಲದಿದ್ದರೆ ಅವನಿಗೆ ಸಮಾಜದಲ್ಲಿ ಹೆಚ್ಚಿನ ಗೌರವ ಲಭಿಸಲಾಗದು. ಆದ್ದರಿಂದ ಮಾನವನ ಆಧ್ಯಾತ್ಮಿಕ ಬೆಳವಣಿಗೆ ಅತ್ಯಂತ ಆವಶ್ಯಕವಾಗಿದೆ.